


ಎಡದಿಂದ ಬಲಕ್ಕೆ

1. ಹನುಮನ ಮುಖದ ಮೇರೆಗೆ ಒಪ್ಪಿಗೆ ಸಿಕ್ಕಿದೆ (4)
3. ಶೌರ್ಯದಿಂದ ಈಜಿ ತೋರಿಸಲು ತಕ್ಕದ್ದು ಕಡಲು (3)
4. ಹನುಮನೋ, ಭೀಮನೋ ವಾಯು ದೇವತೆಯ ಮಗನೇ ತಾನೇ? (3)
6. ಹಾಸಿಗೆಯನ್ನು ಕಂಡೊಡನೆ ಕಪಟ ಮಂದಹಾಸ (4)
8. ಬೆಂಕಿ ಮನೆಯಿಂದ ಕಾಪಾಡಲು ದೃಢ ಬೃಹತ್ ಶರೀರ (4)
10. ಕುಗ್ಗಿಸಲು ಏನೂ ಇಲ್ಲ, ಇದು ಬೆಳೆ ಕೊಯ್ಯುವ ಸಮಯ (4)
12. ನಾವೆಯನ್ನು ಈತನೇ ನಡೆಸಿ ಗಳಿಸಿದ್ದು ಕೈ ತುಂಬ ಬೆಣ್ಣೆ (4)
16. ಲಲ್ಲಯಿಸುತ್ತ ಹಾಡಿದ ರಾಗದ್ದು ಸೌಂದರ್ಯದ್ದೇ ಹೆಸರು (3)
17. ತಂಬೆಲರಿನಂತೆ ಹಿತಕರ ನಾದ ತುಂಬುವ ಶ್ರುತಿ ವಾದ್ಯ (3)
18. ತರುಣ ತ್ರಯರು ಸೇರಿ ರೂಪಿಸಿದ್ದು ಈ ಯುದ್ಧ ಕ್ರಮ (4)

ಮೇಲಿಂದ ಕೆಳಕ್ಕೆ

1. ಅಂದಿನ ದಿನಕ್ಕೆಂದರೆ ಅದೇ ಹೆಚ್ಚು (3)
2. ಅಲ್ಲಿ ಸಿಕ್ಕ ವಸತಿಯಲ್ಲಿ ಎಲ್ಲೆಲ್ಲೂ ರತ್ನಗಂಬಳಿ (3)
3. ನಾಶಮಾಡಲೆಂದು ತೊಡಗಿದ್ದ ಕಿಚ್ಚು ಆರಿದ್ದಾಯಿತು (3)
5. ಮೇಜನ್ನು ಮಾರಿ ತಯಾರಿಸುವುದೇ ಅವನ ಜೀವನ (3)
6. ಸದ್ದಡಗಿಸುವ ಹುನ್ನಾರವನ್ನು ಮುಚ್ಚಿಡು (4)
7. ಗಾರೆ ಕೆಲಸವನ್ನು ಕಲಿಸಲೂ ಒಂದು ಶಿಕ್ಷಣ ಕೇಂದ್ರ (4)
8. ಜೇಬನ್ನು ಕತ್ತರಿಸುತ್ತಾರೆಂದು ಹೆದರಿರುವ ಮನುಷ್ಯರು (4)
9. ಮುದಿಯನಂತೆ ಕಂಡನಲ್ಲ, ಕಾಲನ ಕಿಂಕರ (4)
11. ಪಲ್ಲಕ್ಕಿ ಏರಿದವನ ಕೈಯಲ್ಲಿ ತಲೆಬುರುಡೆ ಏಕೆ? (3)
13. ವಜ್ರವನ್ನು ಕೊಂಡವನು ಪ್ರಾಚೀನ ಪ್ರಧಾನ ಮಂತ್ರಿ (3)
14. ಆತುರದಿಂದಾಗಿ ವ್ಯತ್ಯಾಸ ಬಂತು (3)
15. ಅದೇ ಆತುರದಿಂದಲೇ ಪರಿಸ್ಥಿತಿ (3)

## 06–08–15ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಸಹಜ; 3. ಕನಿಷ್ಠ; 7. ಕನವರ; 8. ಪ್ರಮತ್ತ; 9. ಕರ, 12. ಯತಿ; 14. ತನಯ; 15. ಲಕ್ಷಾಂತರ; 17. ಆಕರ; 18. ಪ್ರಾಣಭಯ.

ಮೇಲಿಂದ ಕೆಳಕ್ಕೆ:

1. ಅಷ್ಟ; 2. ಹನನ; 4. ನಿರುತ್ತರ; 5. ಪಾರಕ; 6. ಅಪ್ರಮೇಯ; 10. ರಸಾಯನ; 11. ಆಂತರಿಕ; 13. ತಿಲಕ; 16. ತಲ್ಲಣ; 17. ಆಯ.

# ತಿಮಿಂಗಿಲದ ಆಹಾರ

ತಿಮಿಂಗಿಲ – ಸ್ತನಿವರ್ಗಕ್ಕೆ ಸೇರಿರುವ, ಬೃಹದ್ಗಾತ್ರಕ್ಕೆ ಸಮಾನಾರ್ಥಕವಾಗಿರುವ ಸುಪ್ರಸಿದ್ಧ ಸಾಗರ ಪ್ರಾಣಿ. ಆನೆಗೂ ಹೋಲಿಸಲಾಗದ ಭಾರೀ ಗಾತ್ರ, 40–50 ಅಡಿ ಉದ್ದ, 45–50 ಟನ್ ತೂಕ ಅವುಗಳಲ್ಲಿ ಸಾಮಾನ್ಯ ಧರೆಯ ಅತ್ಯಂತ ದೈತ್ಯಗಾತ್ರದ ಪ್ರಾಣಿ ಎಂಬ ದಾಖಲೆಯ 'ನೀಲಿ ತಿಮಿಂಗಿಲ'ದ್ದಂತೂ ಕಲ್ಪನಾತೀತ ತೂಕ, ಉದ್ದ. ಅದರ ಉದ್ದ ಒಂದು ನೂರು ಅಡಿ ಮೀರುತ್ತದೆ; ತೂಕ ಒಂದು ನೂರು ಟನ್‌ಗೂ ಅಧಿಕ. ಸ್ಪಷ್ಟವಾಗಿಯೇ ಈ ತಿಮಿಂಗಿಲದ ಮುಂದೆ ಆನೆ ಘೇಂಡಾಗಳದೂ ಇಲಿ ಗಾತ್ರ. ಸಹಜವಾಗಿಯೇ ತಿಮಿಂಗಿಲಗಳು ಸೇವಿಸುವ ಆಹಾರ ಪ್ರಮಾಣವು ವಿಪರೀತ – ಪ್ರತಿ ದಿನಕ್ಕೆ ಒಂದು ಟನ್‌ವರೆಗೆ!

ತಿಮಿಂಗಿಲಗಳದು ಏಕರೂಪ ಆಹಾರ ಕ್ರಮ ಅಲ್ಲ. ತಿಮಿಂಗಿಲಗಳ ಎಲ್ಲ ಪ್ರಭೇದಗಳನ್ನೂ ಎರಡು ಪ್ರಧಾನ ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ: 'ಬಲೀನ್ ತಿಮಿಂಗಿಲಗಳು ಮತ್ತು ಹಲ್ಲಿನ ತಿಮಿಂಗಿಲಗಳು' ಹೆಸರೇ ಸೂಚಿಸುವಂತೆ ಹಲ್ಲಿನ ತಿಮಿಂಗಿಲಗಳು (ಚಿತ್ರ – 2) ಬಾಯಲ್ಲಿ ದೃಢವಾದ ದಂತಪಂಕ್ತಿಗಳನ್ನು ಪಡೆದಿವೆ, ಆದರೆ ಬಲೀನ್ ತಿಮಿಂಗಲಗಳ ಬಾಯಲ್ಲಿ (ಚಿತ್ರ – 1) ಹಲ್ಲುಗಳಿಲ್ಲ. ಅದಕ್ಕೆ ಬದಲಾಗಿ ಅವುಗಳ ಬಾಯಿಯ ಮೇಲ್ದವಡೆಯಿಂದ ಬಾಯಿಯಷ್ಟೂ ಅಗಲಕ್ಕೆ ಕೊಂಬಿನಂಥ ವಸ್ತುವಿನ ತೆಳ್ಳಗಿನ ಬಳುಕುವ ಬಾಚಣಿಗೆಯಂತಹ ತೆರೆಯೊಂದು ಇಳಿಬಿಟ್ಟಿರುತ್ತದೆ. ಈ ನಿಮಿಟಗೇ ಬಲೀನ್ ಎಂದು ಹೆಸರು. ನೀಲಿ ತಿಮಿಂಗಿಲ, ಹಂಪ್‌ಬ್ಯಾಕ್ ತಿಮಿಂಗಿಲ, ರೈಟ್ ತಿಮಿಂಗಿಲ ಇತ್ಯಾದಿ ಎಲ್ಲವೂ ಬಲೀನ್ ತಿಮಿಂಗಿಲಗಳು. ಆದರೆ ಸ್ಪರ್ಮ್ ತಿಮಿಂಗಿಲ, ಬೆಲ್ಯೂಗಾ, ನಾರ್ವಾಲ್ .... ಇವು ಹಲ್ಲಿನ ತಿಮಿಂಗಿಲಗಳು.




ಸ್ಪಷ್ಟವಾಗಿಯೇ ಹಲ್ಲಿನ ತಿಮಿಂಗಿಲಗಳು ಮತ್ತು ಬಲೀನ್ ತಿಮಿಂಗಿಲಗಳು ಆಹಾರ ಗಳಿಸುವ ಮತ್ತು ಸಿಕ್ಕ ಆಹಾರವನ್ನು ಸೇವಿಸುವ ಕ್ರಮಗಳು ಭಿನ್ನಭಿನ್ನ.

ಹಲ್ಲಿನ ತಿಮಿಂಗಿಲಗಳು ಕಡಲಲ್ಲಿ ಗಂಭೀರವಾಗಿ ಈಜಾಡುತ್ತಾ ಭಾರೀ ಸಂಖ್ಯೆಯ ಮತ್ಸ ಸಮೂಹಗಳನ್ನು ಪತ್ತೆ ಮಾಡಿ ಎರಗಿ ಧಾಳಿ ಮಾಡುತ್ತವೆ. ಬಾಯಿಗೆ ಸಿಗುವ ಮೀನುಗಳನ್ನು ಹಲ್ಲುಗಳಿಂದ ಛಿದ್ರಗೊಳಿಸಿ ನುಂಗುತ್ತವೆ. ನಾನಾ ವಿಧ ಮತ್ಸ್ಯಗಳನ್ನಷ್ಟೇ ಅಲ್ಲದೆ ಅಕ್ಟೋಪಸ್, ಸ್ಕ್ವಿಡ್‌ಗಳಂತಹ ಮೃದ್ವಂಗಿಗಳನ್ನೂ ಈ ಗುಂಪಿನ ತಿಮಿಂಗಿಲಗಳು ಬೇಟೆಯಾಡುತ್ತವೆ. ಬಲೀನ್ ತಿಮಿಂಗಿಲಗಳಿಗೆ ಹೀಗೆ ಆಹಾರ ಪ್ರಾಣಿಗಳನ್ನು ಹಿಡಿದು ಬೇಟೆಯಾಡುವುದು ಸಾಧ್ಯವಿಲ್ಲ. ಸಾಗರಾವರದ ಸೂಕ್ಷ್ಮಗಾತ್ರದ ಜೀವಿಗಳಾದ 'ಪ್ಲಾಂಕ್ಟನ್'ಗಳು ಮತ್ತು ಅತಿ ಕುಬ್ಜ 'ಕ್ರಿಲ್'ಗಳು ಕಿಕ್ಕಿರಿದಿರುವ ಪ್ರದೇಶಗಳಲ್ಲಿ ಬಾಯ್ದೆರೆದು ಬಾಯ್ತುಂಬ ನೀರನ್ನು ತುಂಬಿಕೊಂಡು ಬಲೀನ್ ಮೂಲಕ ಸೋಸುವಂತೆ ಹೊರಹರಿಸುತ್ತವೆ. ಆಗ ಬಾಯಲ್ಲಿ ಉಳಿದ ಪ್ಲಾಂಕ್ಟನ್‌ಗಳು ಮತ್ತು ಕ್ರಿಲ್‌ಗಳನ್ನು ನುಂಗುತ್ತವೆ. ತಿಮಿಂಗಲಗಳ ಆಹಾರ ಮತ್ತು ಆಹಾರಗಳಿಕ ಕ್ರಮ ಹೀಗೆ ಭಿನ್ನ ಭಿನ್ನ.

■ ಎನ್. ವಾಸುದೇವ್